**ಓಎಸ್ ನಂಃ 10/2009**

**ಡಿಡಬ್ಲೂಃ 1**

**ಸಾಕ್ಷಿಗೆ ದಿನಾಂಕ 14-01-2026 ರಂದು ಮಧ್ಯಾಹ್ನದ ನಂತರ ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ.ಎಸ್.ಎ.ಕೆ. ವಕೀಲರಿಂದ

ನಿಮ್ಮ ತಕರಾರು ಮತ್ತು ಪ್ರಮಾಣಪತ್ರದಲ್ಲಿ ಸಂಗತಿಗಳನ್ನು ನಮೂದು ಮಾಡಲು ನಾನೇ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ನಾನು ಮಾಹಿತಿ ನೀಡಿದಂತೆಯೇ ನನ್ನ ವಕೀಲರು ಅವುಗಳನ್ನು ತಯಾರಿಸಿರುತ್ತಾರೆ. ನಿಮ್ಮ ತಕರಾರಿನಲ್ಲಿ ಚಿತ್ತಾಪುರದಿಂದ ಯಾದಗಿರಿ ರಸ್ತೆ ತಯಾರಿಸಲು ನಿಮ್ಮ ಜಮೀನನ್ನು ಸರಕಾರದವರು ವಶಪಡಿಸಿಕೊಂಡಿದ್ದಾರೆಂದು ನಮೂದು ಮಾಡಿದ್ದು ರಸ್ತೆ ಅಗಲೀಕರಣಕ್ಕೆ ಜಮೀನನ್ನು ವಶಪಡಿಸಿಕೊಳ್ಳುವ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನನ್ನ ಪ್ರಕಾರ ನನಗೆ ಸಂಬಂಧಪಟ್ಟ ಜಮೀನನ್ನು ಸರಕಾರದವರು 1962ರಲ್ಲಿ ವಶಪಡಿಸಿಕೊಂಡಿರುತ್ತಾರೆ. ನಿಡಿ-1ರಲ್ಲಿ ನೀವು 20 ಗುಂಟೆ ಜಾಗ ಖರೀದಿಗೆ ಕರಾರು ಪತ್ರ ಮಾಡಲಾಗಿದೆ ಎಂದು ನಮೂದು ಮಾಡಿದ್ದೀರಿ ಹಾಗಾದರೆ ಸದರಿ 20 ಗುಂಟೆ ರಸ್ತೆಗೆ ಹೋದ 18 ಗುಂಟೆ ಸೇರಿ 20 ಗುಂಟೆ ಆಗಿದೆಯಾ ಅಥವಾ ರಸ್ತೆ ಬಿಟ್ಟು 20 ಗುಂಟೆ ಜಾಗ ಇದೆಯಾ ಎಂದು ಕೇಳಿದಾಗ ಸಾಕ್ಷಿ 18 ಗುಂಟೆ ಜಾಗ ರಸ್ತೆಗೆ ಹೋದ ಜಾಗವನ್ನು ಸೇರಿ ನಿಡಿ-1 ಕರಾರು ಪತ್ರ ಆಗಿದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು 10 ಗಂಟೆ ಜಾಗ ರಸ್ತೆಗೆ ಹೋಗಿದೆ ಎಂದು ನುಡಿಯುತ್ತಾರೆ. ಹಾಗಾದರೆ ನೀವು ಎಷ್ಟು ಕ್ಷೇತ್ರದಲ್ಲಿ ನಿಮ್ಮ ಬೆಳೆ ಬೆಳೆಯುತ್ತಿದ್ದೀರಿ ಎಂದರೆ ಸಾಕ್ಷಿ 10 ಗುಂಟೆ ಜಾಗದಲ್ಲಿ ನನ್ನ ಕಬ್ಜಾ ಇದ್ದು ಅದರಲ್ಲಿ ಬೆಳೆ ಬೆಳೆಯುತ್ತಿದ್ದೇನೆ ಎಂದು ನುಡಿಯುತ್ತಾರೆ. ಮೃತ ವಾದಿಯ ಅಜ್ಜನ ಹೆಸರು ಶಾಂತರಾಜು ಎಂದರೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.

ಓಎಸ್ ನಂಃ **10/2009**
ಡಿಡಬ್ಲೂಃ **1**

**<u>ಸಾಕ್ಷಿಗೆ ದಿನಾಂಕ 14-01-2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಮುಂದುವರಿದ ಮುಖ್ಯ ವಿಚಾರಣೆ ಪ್ರತಿವಾದಿ ಪರ ಶ್ರೀ.ವಿ.ಆರ್.ಪಿ. ವಕೀಲರಿಂದ</u>**

ತಹಶೀಲ್ದಾರ್ ಚಿತ್ತಾಪುರ್ ಇವರು ನೀಡಿದ ಹಿಂಬರಹವನ್ನು ಹಾಜರುಪಡಿಸಿದ್ದು ಅದರನ್ನು ನಿಡಿ-17 ಎಂದು, ಸರ್ವೆ ನಂಬರ್ 418 ನೇದರ ಕೈಬರಹದ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ-18 ಎಂದು, ಸರ್ವೆ ನಂಬರ್ 418 ಮೇಲಿನ Encumbrance Certificate ಹಾಜರುಪಡಿಸಿದ್ದು ಅದನ್ನು ನಿಡಿ-19 ಎಂದು ಗುರುತಿಸಲಾಯಿತು. ಮೃತ ವಾದಿ ನನ್ನ ಸಮಕ್ಷಮ ನಿಡಿ-1ಕ್ಕೆ ಸಹಿ ಮಾಡಿರುತ್ತಾನೆ.

<u>ಪಾಟೀ ಸವಾಲುಃ ವಾದಿ ಪರ ಶ್ರೀ.ಎಸ್.ಎ.ಕೆ. ವಕೀಲರಿಂದ</u>

ನಿಡಿ-1 ಬರೆಯಲು ಮಾಹಿತಿಯನ್ನು ಮೃತ ವಾದಿ ನೀಡಿರುತ್ತಾನೆ. ನಿಡಿ-1 ತಯಾರಿಸುವಾಗ ನಾನು ಅಲ್ಲಿದ್ದೆ. ನಿಡಿ-1ನ್ನು ಭೀಮರಾಯ ಕುಂಬಾರ್ (ಕುಂಟು ಮಾಸ್ಟರ್) ಬರೆದಿರುತ್ತಾನೆ. ನಿಡಿ-1 ಬರೆಯುವಾಗ ವಾದಿಯೊಂದಿಗೆ ನಾನು ಮತ್ತು ಉಳಿದ ಸಾಕ್ಷಿದಾರರೂ ಇದ್ದರು. ನಿಡಿ-1ಕ್ಕೆ ಮೃತ ವಾದಿ ಮಾತ್ರ ಸಹಿ ಮಾಡಿದ್ದಾನೆ ಎಂದರೆ ಸರಿ. ಸಾಕ್ಷಿ ಮುಂದುವರಿದು ವಾದಿಗೆ ಇಬ್ಬರು ಸಹೋದರರಿದ್ದರೂ ಸಹ ದಾವಾ ಆಸ್ತಿಗೆ ಮೃತ ವಾದಿಯ ಹೆಸರು ಮಾತ್ರ ಪಟ್ಟೆದಾರ ಎಂದು ನಮೂದಾದ ಕಾರಣ ಆತ ಮಾತ್ರ ಸಹಿ ಮಾಡಿದ್ದಾನೆಂದು ನುಡಿಯುತ್ತಾರೆ. ನಿಡಿ-1 ದಾಖಲೆಯ ಮೇಲೆ ನಾನು ಮೃತ ವಾದಿಗೆ ಅಥವಾ ಆತನ ಮಕ್ಕಳಿಗೆ ನಿಡಿ-1ರ ಪ್ರಕಾರ ದಾಖಲೆಯನ್ನು ಬರೆದುಕೊಡಲು ನಾನು ನೋಟೀಸ್ ಕೊಟ್ಟಿಲ್ಲ. ನನ್ನ ಪ್ರಕಾರ ದಾವಾ ಆಸ್ತಿಯಲ್ಲಿ ಮೃತ ವಾದಿಯ ಸಹೋದರರಾದ ಆನಂದ ಮತ್ತು ಕೃಷ್ಣಪ್ಪ ಇವರಿಗೆ ಪಾಲು ಇದೆ. ನನ್ನ ಪ್ರಕಾರ ದಾವಾ ಆಸ್ತಿಯ ಮಧ್ಯ ಭಾಗದಲ್ಲಿ ನಿಡಿ-1ರ ಪ್ರಕಾರ ನನಗೆ 20 ಗುಂಟೆ ಜಾಗವನ್ನು ಬರೆದು ಕೊಡಲಾಗಿದೆ. ನನ್ನ ಪ್ರಕಾರ ಸದರಿ 20 ಗುಂಟೆಯ ಪೂರ್ವದಲ್ಲಿ ಚಿತ್ತಾಪುರ್ ಯಾದಗಿರ್ ಮುಖ್ಯ ರಸ್ತೆ ಇದೆ. ದಾವಾ ಆಸ್ತಿಯು ಇನ್ನೂ ಪೋಡಿ ಆಗಿಲ್ಲ ಮತ್ತು ಪೋಡಿಗೆ ಯಾವುದೇ ಅರ್ಜಿ ಸಲ್ಲಿಸಿಲ್ಲ. ನಿಡಿ-1ರಲ್ಲಿ ನನಗೆ 20 ಗುಂಟೆ ಕಬ್ಜೆ ಕೊಟ್ಟ ಬಗ್ಗೆ ನಮೂದು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ-1ರಲ್ಲಿ ಚಕ್ ಬಂದಿ ಹಾಕಿ ಈ ಭಾಗವನ್ನು

ನಿಮಗೆ ಕೊಡಲಾಗಿದೆ ಎಂದು ನಮೂದು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನೀವು ವಾದಿಗೆ ಯಾವುದೇ ಹಣವನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಿಡಿ-1 ದಾಖಲೆ ಬಿಟ್ಟು ದಾವಾ ಆಸ್ತಿ ಕುರಿತು ಮೃತ ವಾದಿ ನನಗೆ ಯಾವುದೇ ಬೇರೆ ದಾಖಲೆ ಬರೆದುಕೊಟ್ಟಿಲ್ಲ. ನನ್ನ ಪ್ರಕಾರ ಮ್ಯುಟೇಶನ್ ನ್ನು ನನ್ನ ಹೆಸರಿಗೆ ಮೃತ ವಾದಿಯೇ ಮಾಡಿಕೊಟ್ಟಿದ್ದಾನೆ. ಮೃತ ವಾದಿ ನನ್ನ ಹೆಸರಿಗೆ ಮ್ಯುಟೇಶನ್ ಮಾಡಲು ಯಾವುದೇ ಅರ್ಜಿ ನೀಡಿರಲಿಲ್ಲ. ಮ್ಯುಟೇಶನ್ ನನ್ನ ಹೆಸರಿಗೆ ಆಗುವಾಗ ಕಾಯ್ದೆ ಪ್ರಕಾರ ಕ್ರಮಗಳನ್ನು ತೆಗೆದುಕೊಂಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಮೃತ ವಾದಿ ನನ್ನಿಂದ ರೂ.600/- ಪಡೆದು ಮ್ಯುಟೇಶನ್ ಮಾಡಿಸಿದ್ದಾನೆಂದು ನುಡಿಯುತ್ತಾರೆ.

1997ರಲ್ಲಿ ರಸ್ತೆ ಅಗಲೀಕರಣಕ್ಕಾಗಿ ನನಗೆ ಮತ್ತು ಮೃತ ವಾದಿಗೆ ನೋಟೀಸು ಬಂದಿದ್ದವು. ನೋಟೀಸು ನಿಮಗೆ ಬಂದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಎಸಿ ಸೇಡಂ ಇವರು ಕಳುಹಿಸಿದ 4(1) ನೋಟೀಸ್ ಗೆ ಮತ್ತು 6ಪಿ1) ನೋಟೀಸ್ ಗೆ ಮೃತ ವಾದಿಯ ಸಹಿ ಇಲ್ಲದಿದ್ದ ಕಾರಣ ನೀವು ಅದನ್ನು ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-16ರಲ್ಲಿ ಮೃತ ವಾದಿಯ ಹೆಬ್ಬೆಟ್ಟಿನ ಗುರುತು ಇದ್ದು ಅದನ್ನು ನೀವೇ ಹೆಬ್ಬೆಟ್ಟಿನ ಗುರುತು ಹಾಕಿದ್ದೀರಿ ಎಂದರೆ ಸರಿಯಲ್ಲ. ರಸ್ತೆಗಾಗಿ ಸರಕಾರದವರು ಅಕ್ವಿಝಿಷನ್ ಮಾಡಿದಾಗ ರೂ.30,000/- ಮೃತ ವಾದಿಗೆ ಬಂದಿದ್ದು ನಾನು ಬ್ಯಾಂಕ್ ಗೆ ಹೋಗಿ ಅದರಲ್ಲಿ ರೂ.8,000/- ಪಡೆದಿರುತ್ತೇನೆ. ಸಾಕ್ಷಿ ಮುಂದುವರಿದು ಮೃತ ವಾದಿಯೇ ನನಗೆ ಕೊಟ್ಟಿರುತ್ತಾನೆ ಎಂದು ನುಡಿಯುತ್ತಾರೆ. ಸರಕಾರದವರು ರಸ್ತೆಗೆ ಜಾಗ ಅಕ್ವಿಝಿಷನ್ ಮಾಡಿದಾಗ ರೂ.25,759/- ವನ್ನು ಕೇವಲ ಮೃತ ವಾದಿಯ ಹೆಸರಿಗೆ ನಿಪಿ-17ರಂತೆ ಹಣ ನೀಡಿದ್ದಾರೆ ಎಂದರೆ ಸರಿ. ಸರಕಾರದವರು ಸದರಿ ರಸ್ತೆ ಅಕ್ವಿಝಿಷನ್ ಕುರಿತು ನನಗೆ ಯಾವುದೇ ಹಣವನ್ನು ನೇರವಾಗಿ ನೀಡಿಲ್ಲ. ನಿಮ್ಮ ಮಾಲಿಕತ್ವದ ಯಾವುದೇ ಜಾಗ ರಸ್ತೆಗೆ ಹೋಗಿಲ್ಲ ಆದ ಕಾರಣ ನಿಮಗೆ ಹಣ ನೀಡಿಲ್ಲ ಎಂದರೆ ಸರಿಯಲ್ಲ. ರಸ್ತೆ ಅಗಲೀಕರಣಕ್ಕಾಗಿ ಸರಕಾರದವರು ನನಗೆ ಜಾಗ ಬೇಕೆಂದು ಯಾವುದೇ ನೋಟೀಸು ನೀಡಿಲ್ಲ. ನಾನು ಸೇಡಂ ನ್ಯಾಯಾಲಯದಲ್ಲಿ 1962ರಲ್ಲಿ ರಸ್ತೆ ಮಾಡುವಾಗ ಸರ್ವೆ ನಂಬರ್ 418ನ ಜಾಗ ಹೋಗಿದೆ ಎಂದು ಹೇಳಿದ್ದೀರಿ ಹಾಗಾದರೆ 1997ರಲ್ಲಿ ರಸ್ತೆ ಇರುವಾಗ ನಿಮ್ಮ ಯಾವ ಜಾಗ ಹೋಗಿದೆ ಎಂದು ಕೇಳಿದಾಗ ಸಾಕ್ಷಿ ನಾನು ಸೇಡಂ ನ್ಯಾಯಾಲಯದಲ್ಲಿ ಹೇಳಿದ್ದು ನಿಜ ಈಗ ನನಗೆ ಅದರ

ಕುರಿತು ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ಲಾಡಲಾಪುರ ಗ್ರಾಮದ ಈಶ್ವರಪ್ಪ ತಂದೆ ಚೆನ್ನಯ್ಯ ಇವರ ಜಾಗವನ್ನು ರಸ್ತೆಗಾಗಿ 1962ರಲ್ಲಿ ಪಡೆದಿದ್ದು ಅವರಿಗೆ ಪರಿಹಾರ ಮತ್ತು ಬಡ್ಡಿಯನ್ನು ಸರಕಾರದವರು ನಿಪಿ-19 ರಂತೆ ನೀಡಿದ್ದಾರೆ ಎಂದರೆ ಸರಿ.

ಈ ಹಂತದಲ್ಲಿ ಬೆಳಗಿನ ಅವಧಿ ಮುಕ್ತಾಯವಾದ ಕಾರಣ ಮುಂದುವರಿದ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.